ಸೀಳು ತುಟಿ, ಸೀಳು ದವಡೆ, ಸುಟ್ಟ ಗಾಯಗಳ ಕಲೆಗಳು... ಎಂಥವರಿಗೂ ಹಿಂಸೆಯೇ. ಉಚಿತ ಪ್ಲಾಸ್ಟಿಕ್ ಸರ್ಜರಿ ಮೂಲಕ ಅಂಥವರ ಮುಖದಲ್ಲಿ ನಗು ತುಂಬಿ, ಮನದಲ್ಲಿ ಆತ್ಮವಿಶ್ವಾಸ ಬೆಳೆಸುವ ಕಾರ್ಯವನ್ನು ಕಳೆದ 25 ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ ಫ್ರೆಂಡ್ಸ್ ವೆಲ್‌ಫೇರ್ ಆರ್ಗನೈಸೇಷನ್. ಈ ಸಮಸ್ಯೆ ಇರುವವರು ಫೆ.3ರಂದು ಬೆಂಗಳೂರಿನ ವೇಗಸ್ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯಲ್ಲಿ ನಡೆಯಲಿರುವ ಶಿಬಿರದ ಪ್ರಯೋಜನ ಪಡೆಯಬಹುದು.



# ಬಾಡಿದ ಮುಖದಲ್ಲಿ ಫ್ರೆಂಡ್ಸ್ ಹೂನಗೆ

**ತಪಾಸಣೆ:** ಫೆ. 3. 2019.
ಬೆಳಿಗ್ಗೆ 8.30ರಿಂದ

**ಶಸ್ತ್ರಚಿಕಿತ್ಸೆ:** ಫೆ. 4ರಿಂದ 13.

**ಸ್ಥಳ:** ವೇಗಸ್ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, 18ನೇ ಅಡ್ಡರಸ್ತೆ, ಬಸ್ ನಿಲ್ದಾಣದ ಹತ್ತಿರ ಮಲ್ಲೇಶ್ವರಂ ಬೆಂಗಳೂರು 560003.

ಶಿಬಿರದಲ್ಲಿ ಪಾಲ್ಗೊಳ್ಳುವ ರೋಗಿಗಳು 3ನೇ ಫೆಬ್ರುವರಿ 2019ರಂದು ಬೆಳಿಗ್ಗೆ 8ಕ್ಕೆ ಹಾಜರಿರಬೇಕು.

## ನೋಂದಣಿ

ತಪಾಸಣೆಗೆ ಆಗಮಿಸುವ ಮೊದಲು ರೋಗಿಗಳು 98803 07780 ಅಥವಾ 95913 98060 ವಾಟ್ಸಾಪ್ ಸಂಖ್ಯೆಗೆ ತಮ್ಮ ಭಾವಚಿತ್ರ ಹಾಗೂ ಮಾಹಿತಿಯನ್ನು ಕಳುಹಿಸುವ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಅವರ ಕುಟುಂಬದವರು, ಸ್ನೇಹಿತರು, ಅಕ್ಕ–ಪಕ್ಕದ ಮನೆಯವರು ಯಾರಾದರೂ ಈ ಕೆಲಸ ಮಾಡಬಹುದು. ಮಾಹಿತಿ ಕೊಡಲು ಅಥವಾ ಫೋಟೊ ಕಳಿಸಲು ಗೊತ್ತಿಲ್ಲದವರು ಬೇರೆಯವರ ಸಹಾಯ ಪಡೆಯಬೇಕು. ಅದೂ ಆಗದವರು ಒಂದು ಮಿಸ್ ಕಾಲ್ ಕೊಟ್ಟರೂ ಸಾಕು, ಅವರಿಗೆ ಪ್ರತಿಕರೆ ಬರುತ್ತದೆ.

ಹುಟ್ಟಿನಿಂದಲೇ ಬರುವ ಸೀಳು ತುಟಿ, ಸೀಳು ದವಡೆ, ವಕ್ರ ಮುಖ... ಯಾವುದೋ ಒಂದು ಕಹಿ ಗಳಿಗೆಯಲ್ಲಿ ಉದ್ಭವಿಸಿ, ದುಃಸ್ವಪ್ನದ ನೆನಪಂತೆ ಜೀವನವಿಡೀ ಜೊತೆಗೆ ಉಳಿಯುವ ಸುಟ್ಟ ಗಾಯಗಳ ಕಲೆಗಳು ಎಂಥವರಿಗೂ ಹಿಂಸೆಯೇ. ಅನುಭವಿಸುವವರಿಗೆ ಮಾತ್ರವಲ್ಲ, ಅವರ ಹೆತ್ತವರಿಗೂ, ಕುಟುಂಬದವರಿಗೂ ಸದಾಕಾಡುವ ನೋವಿದು.

ಯಾವ ಜನುಮದ ಪಾಪವೊ, ಯಾವ ದೇವರ ಶಾಪವೊ ಎಂದು ಕೊರಗುತ್ತ ಕೂಡುವ ಬದಲು, ಫೆ. 3ರಂದು ಬೆಂಗಳೂರಿನ ವೇಗಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಡೆಯಲಿರುವ ಉಚಿತ ಪ್ಲಾಸ್ಟಿಕ್ ಸರ್ಜರಿ ಶಿಬಿರದತ್ತ ಹೆಜ್ಜೆ ಹಾಕಬಹುದು. ಬಡ ಹಾಗೂ ಅಸಹಾಯಕ ಜನರಿಗಾಗಿ 'ಫ್ರೆಂಡ್ಸ್ ವೆಲ್‌ಫೇರ್ ಆರ್ಗನೈಸೇಷನ್' ಪ್ರತಿ ವರ್ಷವೂ ಉಚಿತ ಪ್ಲಾಸ್ಟಿಕ್ ಸರ್ಜರಿ ಶಿಬಿರವನ್ನು ಆಯೋಜಿಸುತ್ತ ಬಂದಿದೆ.

ಈ ವರ್ಷ ಜರ್ಮನಿಯ ನುರಿತ ಪ್ಲಾಸ್ಟಿಕ್ ತಜ್ಞರ ತಂಡ ಆಗಮಿಸಲಿದ್ದು, ಸೂಕ್ತ ಚಿಕಿತ್ಸೆ ಮತ್ತು ಪ್ಲಾಸ್ಟಿಕ್ ಸರ್ಜರಿಯನ್ನು ಮಾಡಲಿದೆ. ಸೀಳು ತುಟಿ, ಸೀಳು ಮೇಲ್ದವಡೆ, ಸುಟ್ಟ ಗಾಯಗಳಿಂದ ಚರ್ಮಕ್ಕೆ ಆಗಿರುವ ಹಾನಿಯನ್ನು ಇಲ್ಲಿ ಸರಿಪಡಿಸಲಾಗುತ್ತದೆ.

'ಈ ಉಚಿತ ಚಿಕಿತ್ಸೆ ಆರಂಭವಾದ ಮೊದಲ 10 ವರ್ಷಗಳ ಅವಧಿಯಲ್ಲಿ ವರ್ಷಕ್ಕೆ 300ರಷ್ಟು ಜನರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಇತ್ತೀಚಿನ 10–15 ವರ್ಷಗಳಲ್ಲಿ ಗಂಭೀರ ಸ್ಥಿತಿಗಳಲ್ಲಿ ಇರುವವರಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ 100 ಜನರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ' ಎನ್ನುತ್ತಾರೆ ಫ್ರೆಂಡ್ಸ್ ವೆಲ್‌ಫೇರ್ ಆರ್ಗನೈಸೇಷನ್‌ನ ಅಧ್ಯಕ್ಷ ರಾಜಕುಮಾರ ಜೈನ್.

'ನಾವು ಕಳೆದ 25 ವರ್ಷಗಳಿಂದ ಈ ಶಿಬಿರವನ್ನು ವ್ರತದಂತೆ ನಡೆಸಿಕೊಂಡು ಬರುತ್ತಿದ್ದೇವೆ. ಸಾಮಾಜಿಕವಾಗಿಯೂ ಮಾನಸಿಕವಾಗಿಯೂ, ಆರ್ಥಿಕವಾಗಿಯೂ ರೋಗಿಗಳು ಹಾಗೂ ಅವರ ಮನೆಯವರು ಕುಗ್ಗುವಂತೆ ಮಾಡುವ ಗಂಭೀರ ಸ್ವರೂಪದ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು, ಅವರ ಮೊಗದಲ್ಲಿ ನಗೆ ಮೂಡಿಸಿ, ಮನದಲ್ಲಿ ಆತ್ಮವಿಶ್ವಾಸ ತುಂಬುವುದು ನಮ್ಮ ಉದ್ದೇಶ' ಎನ್ನುತ್ತಾರೆ ಅವರು.

ಫೆಬ್ರವರಿ 3.2019 ಭಾನುವಾರ ನೋಂದಾಯಿತರನ್ನು ಸಂಪೂರ್ಣ ತಪಾಸಣೆಗೆ ಒಳಪಡಿಸಲಾಗುತ್ತದೆ. ಅಗತ್ಯ ಕಂಡುಬಂದವರನ್ನು ದಾಖಲಿಸಿಕೊಂಡು ಶಸ್ತ್ರಚಿಕಿತ್ಸೆಯ ಪೂರ್ವತಯಾರಿ ನಡೆಸಲಾಗುತ್ತದೆ. ಸೋಮವಾರ ಫೆ. 4ರಿಂದ 13ರವರೆಗೆ ತುರ್ತು ಸ್ಥಿತಿಗಳನ್ನು ಆಧರಿಸಿ ಶಸ್ತ್ರಚಿಕಿತ್ಸೆ ಕೈಗೊಳ್ಳಲಾಗುತ್ತದೆ.

ತಪಾಸಣೆಗೆ ಒಳಗಾಗುವವರು ತಮ್ಮ ಜೊತೆ ಕುಟುಂಬದ ಸದಸ್ಯರು ಅಥವಾ ಸಂಬಂಧಿಕರನ್ನು ಕಡ್ಡಾಯವಾಗಿ ಕರೆದುಕೊಂಡು ಬರಬೇಕು. ಈ ಹಿಂದೆ ಯಾವುದಾದರೂ ಚಿಕಿತ್ಸೆ ಪಡೆದಿದ್ದರೆ ಅದರ ದಾಖಲೆಪತ್ರಗಳನ್ನು ಜೊತೆಗೆ ತರುವುದು ಸೂಕ್ತ. ತಪಾಸಣೆ, ಚಿಕಿತ್ಸೆ, ವಸತಿ, ಊಟ ಉಚಿತವಾಗಿರುತ್ತದೆ. ರೋಗಿಗಳ ಜೊತೆಗೆ ಬಂದ ಸದಸ್ಯರಿಗೂ ವಸತಿ–ಊಟ ಉಚಿತ.

■ ಸುಶೀಲಾ ಡೋಣೂರ